# STUDIES
## IN THE
# SCRIPTURES
## ಸತ್ಯವೇದ ಗ್ರಂಥದಲ್ಲಿನ ಅಧ್ಯಯನಗಳು

ನ್ಯಾಯದ ಪಥವು ಹೊಳೆಯುವ ಬೆಳಕಿನಂತೆ
ಆ ಪರಿಪೂರ್ಣ ದಿನದವರೆಗೆ
ಹೆಚ್ಚು ಹೆಚ್ಚಾಗಿ ಪ್ರಜ್ವಲಿಸುತ್ತಾ ಬರುವುದು

"The Path of the Just is as the Shining Light,
Which Shineth More and More
Unto the Perfect Day"

**ಸಂಪುಟ 3** SERIES III

# ನಿನ್ನ ರಾಜ್ಯವು ಬರಲಿ
# Thy Kingdom Come
(Kannada)

**"ಅವನ ರಾಜ್ಯಪ್ರಭುತ್ವಗಳೂ ಸಮಸ್ತ ಭೂಮಂಡಲದಲ್ಲಿನ ರಾಜ್ಯಗಳ ಮಹಿಮೆಯೂ
ಪರಾತ್ಪರನ ಭಕ್ತ ಜನರಿಗೆ ಕೊಡೋಣವಾಗುವವು. ಆತನ ರಾಜ್ಯವು ಶಾಶ್ವತ ರಾಜ್ಯ;;
ಸಕಲ ದೇಶಾಧಿಪತಿಗಳು ಆತನಿಗೆ ಅಧೀನರಾಗಿ ಸೇವೆ ಮಾಡುವರು"
– ದಾನಿಯೇಲ 7:27, ಪ್ರಕಟನೆ 5:10**

# ರಾಜಾಧಿರಾಜನಿಗೂ ಮತ್ತು ಕರ್ತರ ಕರ್ತನಿಗೂ

ಸ್ವೀಕೃತರಾಗಲು ಕಾಯುತ್ತಿರುವ
ಆತನ ಪ್ರತಿಷ್ಠಿತ ದೈವಪ್ರೇಷಿತರ ಹಿತಾಸಕ್ತಿಯಲ್ಲಿ

– ಹಾಗೂ –

ಪ್ರತಿಯೊಂದು ಸ್ಥಳದಲ್ಲಿ ಕರ್ತನ ಕರೆಯುವಿಕೆಯ ಮೇಲಿನ ಎಲ್ಲಾ
"ನಂಬಿಗಸ್ತ ಮನೆವಾರ್ತೆಯವರಿಗೂ"

– ಹಾಗೂ –

ದೇವ ಪುತ್ರರ ಆವಿಷ್ಕರಣಕ್ಕಾಗಿ ಕಾಯುತ್ತಿರುವವರಿಗೂ ಮತ್ತು
ನರಳಾಡುತ್ತಾ ಪ್ರಸವವೇದನೆ ಪಡುತ್ತಿರುವ ಜಗತ್ತಿಗೂ

**ಈ ಕಾರ್ಯವು ಸಮರ್ಪಿತವಾಗಿದೆ**

---

"ಅದನ್ನು ಕುರಿತು ನಾನು ಹಿಂದೆ ಸಂಕ್ಷೇಪವಾಗಿ ಬರೆದಿದ್ದೇನೆ; ಬರೆದಿದ್ದನ್ನು ನೀವು ಓದಿ ನೋಡಿದರೆ ಕ್ರಿಸ್ತನ ವಿಷಯವಾದ ಮರ್ಮವನ್ನು
ಕುರಿತು ನನಗಿರುವ ಗ್ರಹಿಕೆಯನ್ನು ನೀವು ತಿಳಿದುಕೊಳ್ಳಬಹುದು. ಆ ಮರ್ಮವು ಈ ಕಾಲದಲ್ಲಿ ದೇವರ ಪರಿಶುದ್ಧ ಅಪೋಸ್ತಲರಿಗೂ
ಪ್ರವಾದಿಗಳಿಗೂ ಪವಿತ್ರಾತ್ಮನಿಂದ ತಿಳಿಸಲ್ಪಟ್ಟಂತೆ ಬೇರೆ ಕಾಲಗಳಲ್ಲಿದ್ದ ಜನರಿಗೆ ತಿಳಿಸಲ್ಪಡಲಿಲ್ಲ... ದೇವರು ನಮ್ಮ ಕರ್ತನಾದ
ಯೇಸುವಿನಲ್ಲಿ ಅನಾದಿಕಾಲದಿಂದ ಮಾಡಿದ ಸಂಕಲ್ಪದ ಮೇರೆಗೆ ತನ್ನ ನಾನಾ ವಿಧವಾದ ಜ್ಞಾನವು ಪರಲೋಕದಲ್ಲಿ
ರಾಜತ್ವಗಳಿಗೂ ಅಧಿಕಾರಗಳಿಗೂ ಈಗ ಕ್ರೈಸ್ತ ಸಭೆಯ ಮೂಲಕ ಗೊತ್ತಾಗಬೇಕೆಂಬುದನ್ನು ಉದ್ದೇಶಿಸಿದ್ದನು"
"ಆತನು ರಹಸ್ಯವಾದ ತನ್ನ ಸಂಕಲ್ಪವನ್ನು ನಮಗೆ ತಿಳಿಯಪಡಿಸುವದರ ಮೂಲಕ ವಿಶೇಷವಾದ
ಜ್ಞಾನವನ್ನೂ ಬುದ್ಧಿಯನ್ನೂ ಕೊಟ್ಟು ಆ ಕೃಪೆಯನ್ನು ಇನ್ನೂ ಹೆಚ್ಚಾಗಿ ನಮಗೆ ತೋರಿಸಿದ್ದಾನೆ.
ತಾನು ಕಾಲವು ಪರಿಪೂರ್ಣವಾದಾಗ ನಿರ್ವಹಿಸಬೇಕಾದ ಒಂದು ಕೃಪೆಯುಳ್ಳ ಸಂಕಲ್ಪವನ್ನು
ಆತನು ಕ್ರಿಸ್ತನಲ್ಲಿ ಮೊಲೇ ನಿಷ್ಕರ್ಷೆ ಮಾಡಿಕೊಂಡಿದ್ದನು. ಅದೇನೆಂದರೆ
ಭೂಪರಲೋಕಗಳಲ್ಲಿರುವ ಸಮಸ್ತವನ್ನೂ ಕ್ರಿಸ್ತನಲ್ಲಿ ಒಂದಾಗಿ
ಕೂಡಿಸಬೇಕೆಂಬುದೇ.ಕ್ರಿಸ್ತನಲ್ಲಿಯೇ
ಸಮಸ್ತವು ಒಂದಾಗುವುದು"
ಎಫೆ. 3:4,5,9;1:8–10

---

1904ರಲ್ಲಿ ಪಾಸ್ಟರ್ ರಸ್ಸೆಲ್‌ರವರಿಂದ ರಚಿಲ್ಪಟ್ಟಿತು

# ನಿನ್ನ ರಾಜ್ಯವು ಬರಲಿ

## ಲೇಖಕನ ಮುನ್ನುಡಿ

## THE AUTHOR'S FOREWORD

ಈ ಸಂಪುಟವನ್ನು 1890ರಲ್ಲಿ ಬರೆಯಲಾಯಿತು ಮತ್ತು ನಂತರದಲ್ಲಿ ಇದು ಅನೇಕ ಭಾಷೆಗಳಲ್ಲಿ ಅನೇಕ ಆವೃತ್ತಿಗಳ ಮೂಲಕ ಮುಂದೆ ಸಾಗಿದೆ ಹಾಗೂ ಇನ್ನೂ ಹೆಚ್ಚಿನ ಅವೃತ್ತಿಗಳು ನಿರೀಕ್ಷೆಯಲ್ಲಿವೆ. ದೇವರ ಸಾವಿರಾರು ಪ್ರತಿಷ್ಠಿತ ಜನರಿಂದ ಪ್ರಶಂಸಾ ಪತ್ರಗಳನ್ನು ನಾವು ಪಡೆದಿದ್ದೇವೆ. ಈ ಸಂಪುಟದ ಮೂಲಕ ದೇವರ ವಾಕ್ಯದ ಜೀವಕರ ನೀರಿನ ಕಾರಂಜಿಯನ್ನು ಅವರು ಪಡೆದುಕೊಂಡಿದ್ದಾರೆ. ರಾಜ್ಯದ ಆದ್ಯಂತವಾಗಿ ಕಡೇವರೆಗೂ ಆಶೀರ್ವಾದವು ಹರಿಯುತ್ತಲೇ ಇರುತ್ತದೆ ಎಂದು ನಾವು ನಂಬುತ್ತೇವೆ. ಸಮುದ್ರಗಳ ಆಳದವರೆಗೆ ಆವರಿಸುವ ನೀರಿನ ಹಾಗೆ ದೇವರ ಜ್ಞಾನವು ಇಡೀ ಭೂಮಿಯನ್ನು ತುಂಬಿಕೊಂಡಿರುತ್ತದೆ.

ಆದಾಗ್ಯೂ ಸತ್ಯವೇದದ ಅಧ್ಯಯನಗಳಿಗೆ ಸಂಬಂಧಿಸಿದಂತೆ ನಾವು ಯಾವುದಾದರೂ ಧರ್ಮಸಂಬಂಧವಾದ ಸಂಪರ್ಕಕ್ಕೆ ಜೋಡಿಸುವುದನ್ನು ನಿರಾಕರಿಸುತ್ತೇವೆ, ಯಾಕೆಂದರೆ ನಾವು ನೂತನ ಯುಗದ ಉದಯದಲ್ಲಿರುವುದರಿಂದ ಸಂತೋಷಿಸುತ್ತೇವೆ, ಸತ್ಯದ ಬೆಳಕು ತುಂಬಾ ಸ್ಪಷ್ಟವಾಗಿ ಹೊಳೆಯುತ್ತಿದೆ ಮತ್ತು ದೈವಿಕ ಯೋಜನೆ ತುಂಬಾ ಸ್ಪಷ್ಟವಾಗಿ ಪ್ರಕಟವಾಗುತ್ತಿರುವುದರಿಂದ 26 ವರ್ಷಗಳ ನಂತರವೂ – ಈ ಸಂಪುಟದ ಒಂದು ಪದವನ್ನಾದರೂ ಬದಲಾಯಿಸುವ ಅವಶ್ಯತೆ ವಿರಳವಾಗಿದೆ.

ವಿಶೇಷವಾಗಿ ನಾವು ಕಾಲಾನುಕ್ರಮದಲ್ಲಿ ಆ ಮಹಾ ಏಳನೇ ದಿನವನ್ನು ಪ್ರವೇಶಿಸಿದಾಗಿನಿಂದ ಅಂತ್ಯದ ಸಮಯವು ವರ್ಷಗಳು ಕಳೆದಂತೆ ಇದನ್ನು ಹೆಚ್ಚು ಹೆಚ್ಚು ಒತ್ತಿ ಹೇಳಿದೆ. ಕೊಯ್ಲಿನ ಕಾರ್ಯವು ಪ್ರಗತಿಯಲ್ಲಿದೆ ಹಾಗೂ ಇನ್ನೂ ಮುಂದುವರೆಯುತ್ತಿರುತ್ತದೆ. ಒಂದು ಕಾಲದಲ್ಲಿ ನಾವು ಸುಗ್ಗಿ ಕೆಲಸವು ಅನ್ಯಜನಾಂಗಗಳವರ ಸಮಯ ಅಂತ್ಯದೊಂದಿಗೆ ಪೂರ್ಣವಾಗಿ ನೆರವೇರುತ್ತದೆಂದು ಭಾವಿಸಿದ್ದರೂ ಸಹ ಅದು ಕೇವಲ ಊಹೆಯಾಗಿದ್ದು ಯಾವ ಸಮರ್ಥನೆಯಿಲ್ಲದೆ ಸಾಬೀತಾಯಿತು. ಏಕೆಂದರೆ, ಸತ್ಯದ ಕುಡುಗೋಲು ಚಾಚಲ್ಪಟ್ಟು ಮತ್ತು ಮಾಗಿದ ಪೈರನ್ನು ಸಂಗ್ರಹಿಸುವ ಕೆಲಸ ಅಕ್ಟೋಬರ್ 1914ರ ಹಿಂದಿನಿಂದಲೂ ಮುಂದುವರೆದಿದೆ. ವಾಸ್ತವವಾಗಿ ವಿಶ್ವಮಹಾಯುದ್ಧವು ಮಾನವೀಯತೆಯನ್ನು ಗಮನಾರ್ಹ ಮಟ್ಟದಲ್ಲಿ ಜಾಗೃತಗೊಳಿಸಿದೆ ಮತ್ತು ಹಿಂದೆಂದಿಗಿಂತಲೂ ಹೆಚ್ಚು ಸ್ವಾತಂತ್ರದ ಚಿಂತನೆಯನ್ನು ಮಾಡಲಾಗುತ್ತಿದೆ. ಅಜ್ಞಾನ, ಮೂಢನಂಬಿಕೆ ಮತ್ತು ಪೂರ್ವಾಗ್ರಹದ ಸಂಕೋಲೆಗಳನ್ನು ಮುರಿಯಲು ಹಾಗೂ ದೇವರ ಚಿತ್ತವನ್ನು ತಿಳಿದು ನೆರವೇರಿಸಲು ಮತ್ತು ಯೇಸುವಿನ ಹೆಜ್ಜೆ ಜಾಡಿನಲ್ಲಿ ನಡೆಯಲು ಬಯಸುವವರನ್ನು ಬಿಡುಗಡೆ (ಮುಕ್ತ)ಗೊಳಿಸಲು ಇವೆಲ್ಲವೂ ಕೊಡುಗೆಯಾಗಿವೆ.

ನಮ್ಮ ಮಹಾ ಅರಸನಿಗೆ ಚುನಾಯಿತರು ಇನ್ನೂ ಹೆಚ್ಚಿನ ಸೇವೆಯ ಅವಕಾಶಗಳಿಗೆ ಒಟ್ಟುಗೂಡಿಸುವಲ್ಲಿ ನಾವು ಸಂತೋಷಿಸುತ್ತೇವೆ. ಇತರರೂ ಸತ್ಯಕ್ಕೆ ಬರುತ್ತಿರುವುದನ್ನು ಮತ್ತು "ಮದುವೆ"ಗೆ ತಯಾರಿ ನಡೆಸುತ್ತಿರುವದನ್ನು ನೋಡಿ ನಮಗೆ ಸಂತೋಷವಾಗುತ್ತದೆ. ಸ್ಪಷ್ಟವಾಗಿ "ಬಾಗಿಲು" ಇನ್ನೂ ಮುಚ್ಚಿಲ್ಲ, ಆದಾಗ್ಯೂ ನಾವು ಬಹಳ ಮುಂಚೆಯೇ ನಿರೀಕ್ಷಿಸುತ್ತಿದ್ದೇವೆ – ಬಹುಶಃ ಒಂದು ಅಥವಾ ಎರಡು ಅಥವಾ ಮೂರು ವರ್ಷಗಳಲ್ಲಿ ಚುನಾಯಿತರ ಪೂರ್ಣ ಸಂಖ್ಯೆಯು ಪೂರ್ಣಗೊಳ್ಳುತ್ತದೆಂದು ಮತ್ತು ಎಲ್ಲರಿಗೂ ತೆರೆಯ ಆಚೆ ನಿರ್ಗಮಿಸಿ ಬಾಗಿಲು ಮುಚ್ಚಲ್ಪಡುತ್ತದೆ.

ನಾವು ನಿರೀಕ್ಷಿಸಿದಷ್ಟು ವೇಗವಾಗಿ ಇಸ್ರೇಲ್‌ನ ಮರುಸ್ಥಾಪನೆ ನೆರವೇರಿಲ್ಲ ಎಂದು ಹೇಳಲು ನಾವು ಸ್ವತಂತ್ರರು. ಅದೇನೇ ಇದ್ದರೂ ಪಾಲೆಸ್ತೈನ್‌ನಲ್ಲಿರುವ ಯೆಹೂದಿಗಳು ಇಲ್ಲಿಯವರೆಗೆ ಅದ್ಭುತವಾಗಿ ಆಶ್ರಯಪಡೆದಿದ್ದಾರೆ ಎಂದು ತೋರುತ್ತದೆ ಮತ್ತು ನಿಸ್ಸಂದೇಹವಾಗಿ ಯುದ್ಧ ಪ್ರಾಂತ್ಯಗಳು, ವಿಶೇಷವಾಗಿ ಪೋಲೆಂಡ್‌ನಲ್ಲಿರುವ ತಮ್ಮ ಸಹಧರ್ಮೀಯರು ಮತ್ತು ಅವರು ಅವಕಾಶವಿದ್ದಾಗ ಪಾಲೆಸ್ತೈನ್‌ಗೆ ಹೋಗಿದ್ದರೆ ಸಂತೋಷಪಡುತ್ತಿದ್ದರು. ಯುದ್ಧದ ಅಂತಿಮ ತೀರ್ಮಾನವು ಇಸ್ರೇಲ್‌ನ ಹಿತಾಸಕ್ತಿಗಳ ಮೇಲೆ ಹೇಗೆ ಪರಿಣಾಮ ಬೀರಬಹುದು ಎಂದು ಹೇಳುವುದು ಕಷ್ಟ. ನಾವು ಕಾಯುವ, ಪರೀಕ್ಷಿಸುವ ಮನೋಭಾವದಲ್ಲಿರಬೇಕು. ಯೆಹೂದಿಗಳ ಪ್ರಯತ್ನದ ಅನುಭವಗಳು ಅಂತಿಮವಾಗಿ ಅವರ ತಾಯ್ನಾಡಿಗೆ ಹೋಗಲು ಅವರಲ್ಲಿ ಗಣನೀಯ ಸಂಖ್ಯೆಯನ್ನು ಹುಟ್ಟುಹಾಕುವಂತೆ ತೋರುತ್ತಿದೆ. ಎಲ್ಲಾ ಯೆಹೂದಿಗಳು ಅಲ್ಲಿಗೆ ಹಿಂತಿರುಗುತ್ತಾರೆ ಎಂದು ನಾವು ಹೇಗೂ ನಿರೀಕ್ಷಿಸಲಾಗದು. ಬದಲಾಗಿ ಅವರ ಪ್ರತಿನಿಧಿ ತಂಡದವರು ಬಾಬೇಲ್‌ನ ಸೆರೆಯಿಂದ ಹಿಂತಿರುಗಿದಂತೆಯೇ, ಬಾಬೇಲ್‌ಗೆ ಸೆರೆಹೋದದ್ದು ದೊಡ್ಡ ಸಮೂಹದವರಾಗಿದ್ದಾಗ್ಯೂ, ಕೇವಲ 52000 ಜನ ಮಾತ್ರ ಹಿಂತಿರುಗಿತು.

ಹಿಂತಿರುಗಿದವರು ದೇವರ ಮತ್ತು ಆತನ ವಾಗ್ದಾನಗಳಲ್ಲಿ ಪೂರ್ಣ ನಂಬಿಕೆಯಿಟ್ಟವರನ್ನು ಪ್ರತಿನಿಧಿಸುತ್ತಾರೆ ಮತ್ತು ನಿಸ್ಸಂದೇಹವಾಗಿ ಇವರು ಇಡೀ ಇಸ್ರಾಯೇಲ್ಯರನ್ನು ಪ್ರತಿನಿಧಿಸುತ್ತಾರೆ. ಈ ವಾಲ್ಯೂಮ್‌ಅನ್ನು ಬರೆದಾಗ ಯೆಹೂದಿಗಳು

ಪಾಲೆಸ್ತೈನ್‌ಗೆ ಹೋಗಲು ಸ್ವಲ್ಪ ಮಾತ್ರವೇ ಯೋಚಿಸಿದ್ದರು ಎಂದು ಓದುಗರಿಗೆ ನಾವು ನೆನಪಿಸುತ್ತಿದ್ದೇವೆ. ಈಗ ಚಿಯೋನಿಸಂ (ಯೆಹೂದ್ಯ ಸ್ವಾಸ್ಥ್ಯ ಚಳುವಳಿ) ಆಗಿದ್ದರೂ ಅದು ಕ್ರಮೇಣ ಧಾರ್ಮಿಕ ಭಾವನೆ ಮತ್ತು ಭರವಸೆಯತ್ತ ಹೊರಳಿತು.

ಈ ವಾಲ್ಯೂಮ್‌ನಲ್ಲಿ (ಸಂಪುಟದಲ್ಲಿ) ವಿಚಾರ ಮಾಡಿರುವ ಗ್ರೇಟ್ ಪಿರಮಿಡ್ ಲೇಖಕರು ತನ್ನ ತತ್ಪರತೆಯನ್ನು ಕಳೆದುಕೊಂಡಿಲ್ಲ. ಅದರ ಅವರೋಣ (ಇಳಿ) ಮಾರ್ಗವು ಇನ್ನೂ ಸಾಂಕೇತಿಕವಾಗಿ ಪಾಪ ಮತ್ತು ಮರಣದ ಆಳ್ವಿಕೆಯಲ್ಲಿ ಮಾನವ ಕುಲದ ಕೆಳಮುಖ ಹಾದಿಯನ್ನು ಪ್ರತಿನಿಧಿಸುತ್ತದೆ. ಮೊದಲನೇ ಆರೋಹಣ ಮಾರ್ಗವು ಇನ್ನೂ ಧರ್ಮಶಾಸ್ತ್ರಯುಗವನ್ನು (ಹಂಚಿಕೆ) ಪ್ರತಿನಿಧಿಸುತ್ತದೆ. ಸಿನಾಯ್‌ನಲ್ಲಿ ದೇವರು ಇಸ್ರಾಯೇಲ್‌ನೊಂದಿಗೆ ಮಾಡಿದ ಒಡಂಬಡಿಕೆ ಮತ್ತು ಆ ಕಟ್ಟಳೆಗಳ ಪ್ರಾಬಲ್ಯದ ಅಡಿಯಲ್ಲಿ ಆ ಜನರನ್ನು ನಡೆಸಲಾಯಿತು. ಗ್ರ್ಯಾಂಡ್‌ಗ್ಯಾಲರಿಯು ಈ ಸುವಾರ್ತಾಯುಗದಲ್ಲಿ ಕ್ರಿಸ್ತನ ಮತ್ತು ಆತನ ಅನುಯಾಯಿಗಳ ಬೋಧನೆಗಳ ಉದಾತ್ತವಾದ ಉನ್ನತಿಯನ್ನು ಪ್ರತಿನಿಧಿಸುತ್ತದೆ. ಗ್ರ್ಯಾಂಡ್‌ಗ್ಯಾಲರಿಯ ಮೇಲಿನ ತುದಿಯಲ್ಲಿರುವ ಹಂತವು ಇನ್ನೂ ಪ್ರಪಂಚದ ವ್ಯವಹಾರಗಳಲ್ಲಿ ಮನುಷ್ಯನನ್ನು ಉನ್ನತ ಸಮತಲಕ್ಕೆ ಎತ್ತಲು ಗಮನಾರ್ಹ ಬದಲಾವಣೆಯನ್ನು ಪ್ರತಿನಿಧಿಸುತ್ತದೆ. ಗ್ರ್ಯಾಂಡ್‌ಗ್ಯಾಲರಿಯ ಮೇಲ್ಭಾಗ ಮತ್ತು ಕಿಂಗ್ಸ್‌ಚೇಂಬರ್ (ರಾಜನ ಕೊಠಡಿ) ಮೇಲಿರುವ ಮಧ್ಯದ ಸಂಪರ್ಕ ಸ್ಥಳಗಳು ಈ ಯುಗದ ಸುಗ್ಗಿಯಲ್ಲಿ ನಮ್ಮ ಕರ್ತನ ಆತ್ಮೀಕ ಪ್ರತ್ಯಕ್ಷತೆಯು 1874ರಲ್ಲಿ ಆರಂಭವಾಗುವದನ್ನು ಪ್ರತಿನಿಧಿಸುತ್ತದೆ.

ಹಳೆಯ ಮತ್ತು ಹೊಸ ಒಡಂಬಡಿಕೆಯ ಧರ್ಮಗ್ರಂಥಗಳಿಂದ ಪ್ರತಿನಿಧಿಸಲ್ಪಟ್ಟಂತೆ ದೇವರ ವಾಕ್ಯದೊಂದಿಗೆ ಸಮಾನಾಂತರ ಅಥವಾ ಸಮಾನತೆಯ ಆಧಾರದ ಮೇಲೆ ಆಗಾಗ್ಗೆ ಕಲ್ಲಿನ ಬೈಬಲ್ ಎಂದು ಕರೆಯಲ್ಪಡುವ ಈ ಗ್ರೇಟ್ ಪಿರಮಿಡ್ಡನ್ನು ಇರಿಸಲು ನಾವು ಎಂದಿಗೂ ಪ್ರಯತ್ನಿಸಿಲ್ಲ. ನಂತರದಲ್ಲಿ ಸರ್ವಶ್ರೇಷ್ಠ ಪ್ರಾಧಿಕಾರವಾಗಿ ಮುಂಚೂಣಿಯಲ್ಲಿ ನಿಲ್ಲುತ್ತದೆ. ಆದಾಗ್ಯೂ ಈ ಪಿರಮಿಡ್‌ನ ರಚನೆಯು ಇತರ ಎಲ್ಲಾ ಪಿರಮಿಡ್‌ಗಳಿಗಿಂತ ವಿಭಿನ್ನವಾಗಿದೆ. ಇದನ್ನು ಕರ್ತನಿಂದ ವಿನ್ಯಾಸಗೊಳಿಸಲಾಗಿದೆ ಮತ್ತು ಈಜಿಪ್ಟ್ ದೇಶದ ಮಧ್ಯದಲ್ಲಿ ಮತ್ತು ಗಡಿಯಲ್ಲಿ ಸ್ಥಂಭವಾಗಿ ಮತ್ತು ಸಾಕ್ಷಿಯಾಗಿರಲು ಉದ್ದೇಶಿಸಲಾಗಿದೆ ಎಂದು ನಾವು ಇನ್ನೂ ನಂಬುತ್ತೇವೆ (ಯೆಶಾಯ 19:19). ಇದು ಖಂಡಿತವಾಗಿಯೂ ಬೇರೆ ಯಾವುದೇ ಕೈಗಳ ಕಲೆ ಅಥವಾ ಸ್ಮಾರಕ ವಸ್ತುಗಳಿಗಿಂತ ಭಿನ್ನವಾದ ಕಥೆಯನ್ನು (ಇತಿಹಾಸ) ತಿಳಿಸುತ್ತದೆ.

ಯುಗಗಳ ದೈವಿಕ ಯೋಜನೆಯ ಅದ್ಭುತವಾಗ ದೃಢೀಕರಣವು ಅದನ್ನು ನಿಜವಾಗಿ ಗ್ರಹಿಸುವ ಪ್ರತಿಯೊಬ್ಬರನ್ನು ಅಚ್ಚರಿಗೊಳಿಸುತ್ತದೆ. ಇದನ್ನು ಮೊದಲು ಆವೃತ್ತಿಯಷ್ಟೇ ತಾಜಾ ಆಸಕ್ತಿಯಿಂದ ಓದಬೇಕು. ಏಕೆಂದರೆ ಅದರ ಪಾಠಗಳು ಪರಿವರ್ತನೆಯಾಗಿಲ್ಲ ಅಥವಾ ಬದಲಿಸಲಾಗಿಲ್ಲ. ಹಳೆಯ ಓದುಗರು ಪಡೆದಿರುವ ಆಶೀರ್ವಾದವನ್ನು ಈ ವಾಲ್ಯೂಮ್‌ನಿಂದ ಹೊಸ ಓದುಗರೂ ಸಹ ಅದೇ ಸಮೃದ್ಧ ಆಶೀರ್ವಾದವನ್ನು ಪಡೆಯುತ್ತಾರೆ ಎಂದು ನಾವು ಭರವಸವಿಡುತ್ತೇವೆ ಹಾಗೂ ದೇವರನ್ನು ನಾವು ಒಟ್ಟಾಗಿ ಮಹಿಮೆಪಡಿಸಬಹುದು ಮತ್ತು ದೇವರ ಪ್ರಿಯಕುಮಾರನ ವೈಭವಯುತ ಸಾಮ್ರಾಜ್ಯದ ಸಂಪೂರ್ಣ ಆರಂಭದ ಹಾದಿಯಲ್ಲಿ ಆತನ ಬೆಳಕನ್ನು ಮತ್ತು ಸೌಕರ್ಯವನ್ನು ಒದಗಿಸುವಲ್ಲಿ ಸಂತೋಷಪಡಬಹುದು.

ಮೆಸ್ಸೀಯನ ಸಾಮ್ರಾಜ್ಯವನ್ನು ದೇವರ ಸಾಮ್ರಾಜ್ಯವಾಗಿ ಆಗಾಗ್ಗೆ ವಿನ್ಯಾಸಗೊಳಿಸಲಾಗುತ್ತದೆ. ಏಕೆಂದರೆ, ಇದು ಮೆಸ್ಸೀಯನ ಕಟ್ಟುನಿಟ್ಟಿನ ನಿರ್ವಹಣೆಯಲ್ಲಿದ್ದರೂ, ಅದರ ಎಲ್ಲಾ ಕಾನೂನುಕಟ್ಟಳೆಗಳು, ನಿಬಂಧನೆಗಳು, ತೀರ್ಪುಗಳು ಇತ್ಯಾದಿಗಳು ದೈವಿಕ ವ್ಯವಸ್ಥೆಗೆ ಕಟ್ಟುನಿಟ್ಟಾದ ಅನುಸರಣೆಯಾಗಿದ್ದು, ಇದು ಬದಲಾಗುವುದಿಲ್ಲ. ಆದ್ದರಿಂದ ನಾವು ಪ್ರಾರ್ಥಿಸುವಾಗ "ನಿನ್ನ ರಾಜ್ಯವು ಬರಲಿ ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ" ಎಂದು ಹೇಳುತ್ತೇವೆ. ನಮ್ಮ ಆಲೋಚನೆಯು ಪರಲೋಕದ ತಂದೆಯ ನಿಯಮ ಮತ್ತು ಸರ್ಕಾರದ ಶ್ರೇಷ್ಠ ಪರಿಪೂರ್ಣತೆಯೇ ನಮ್ಮ ಬಯಕೆಯಾಗಿರಬೇಕು ಮತ್ತು ಕ್ರಿಸ್ತನ ಸಾವಿರ ವರ್ಷದ ಆಳ್ವಿಕೆಯನ್ನು ಎದುರುನೋಡಬೇಕು. ಆತನ ಆಳ್ವಿಕೆಯು ಭೂಮಿಯ ಎಲ್ಲಾ ವಿರೋಧವನ್ನು ಜಯಿಸುವುದು ಮತ್ತು ಮಾನವತೆಯನ್ನು ದೇವರೊಂದಿಗೆ ಪರಲೋಕದ ಪರಿಪೂರ್ಣ ದೇವದೂತರ ಹಾಗೆ ಪೂರ್ಣ ಸಾಂಗತ್ಯಕ್ಕೆ ವಾಪಸು ತರುವುದಾಗಿದೆ.

ಮೆಸ್ಸೀಯನ ರಾಜ್ಯವು ಉದ್ಘಾಟನೆಯ ವಿವಿಧ ಹಂತಗಳನ್ನು ಹೊಂದಿದೆ. ಆತನ ಪ್ರತ್ಯಕ್ಷತೆಯಲ್ಲಿ (ಪರೋಷಿಯಾ) ಮಹಿಮೆಗೊಂಡ ಯೇಸುವಿನ ದೇಹದ ನಿದ್ರೆ ಹೋಗಿರುವ ಆತನ ಸದಸ್ಯರುಗಳನ್ನು ಸಜೀವಗೊಳಿಸುತ್ತಾ ಅಥವಾ ಪುನರುತ್ಥಾನಗೊಳಿಸುತ್ತಾನೆ. ಅಬ್ರಹಾಮನ ಮಹಾನ್ ವಾಗ್ದಾನದ ವಾರಸುದಾರರು – ದೇವರು ಅತ್ಯಂತ ಉನ್ನತಕ್ಕೇರಿಸಿದ ಮಹಾಶ್ರೇಷ್ಠನ ಪ್ರಥಮ ಕಾರ್ಯಕಾರಿ ಕಾಯಿದೆ ಇದಾಗಿದೆ. ಆತನು ಅಧಿಕೃತವಾಗಿ ಭೂಲೋಕದ ಅರಸನ ಸ್ಥಾನವನ್ನು ತೆಗೆದುಕೊಳ್ಳುವ ಮೊದಲು ಆತನ ಸದಸ್ಯರು ಪೂರ್ಣಗೊಳ್ಳಬೇಕು. ಈ ಸತ್ಯದ ಭರವಸೆಯನ್ನು ದೈವಪ್ರೇರಿತ ವಾಕ್ಯದಿಂದ ನೀಡಲಾಗಿದೆ. ನಮಗೆ ಜೀವವಾಗಿರುವ ಕ್ರಿಸ್ತನು ಪ್ರತ್ಯಕ್ಷವಾಗುವಾಗ ನಾವು ಸಹ ಆತನೊಂದಿಗೆ ಪ್ರಭಾವದಿಂದ ಕಾಣಿಸಿಕೊಳ್ಳುತ್ತೇವೆ (ಕೊಲೊಸ್ಸೆ 3:4).

ಮುಂದಿನ ಕ್ರಮದಲ್ಲಿ ಗುರುವು, ಸಭೆಯ ಇನ್ನೂ ಜೀವದಿಂದಿರುವ ತನ್ನ ಸದಸ್ಯರುಗಳೊಡನೆ ವ್ಯವಹರಿಸುತ್ತಾನೆ. ತಲಾಂತುಗಳ ಸಾಮ್ಯದಲ್ಲಿ ತೋರಿಸಿರುವಂತೆ, ಆತನ ರಾಜ್ಯಾಡಳಿತದಲ್ಲಿ ಅರ್ಹತೆ ಅಥವಾ ಅನರ್ಹತೆಗೆ ಸಂಬಂಧಿಸಿದಂತೆ ಗುರುವಿನ ತೀರ್ಪು ಆತನ ಪ್ರತಿಷ್ಠಿತರೆಲ್ಲರ ಮೇಲೆ ಮುಂದೆ ಸಾಗಬೇಕು ಮತ್ತು ಚುನಾಯಿತರ ಸಂಖ್ಯೆಯು ಸಂಪೂರ್ಣವಾಗಿ ಸ್ಥಾಪನೆಯಾಗಬೇಕು ಮತ್ತು ಪುನರುತ್ಥಾನದ ಮೂಲಕ "ಮಾರ್ಪಾಟುಹೊಂದಿ" ಮಹಿಮೆ ಹೊಂದಬೇಕು. ಯಾಕೆಂದರೆ, ರಕ್ತಮಾಂಸವು ದೇವರ ರಾಜ್ಯಕ್ಕೆ ಬಾಧ್ಯವಾಗಲಾರದು (1 ಕೊರಿಂಥ 15:50). ಆನಂತರ ಲೋಕವನ್ನು ರಾಜ್ಯಾಡಳಿತಕ್ಕೆ ಸ್ವಾಧೀನಪಡಿಸಲಾಗುವುದು. ಮಹಿಮಾ ಪದವಿ ಹೊಂದಿದಾತನು ತಂದೆಯನ್ನು ಕೇಳುತ್ತಾನೆ – ಮತ್ತು ದೇವರು ಭೂಲೋಕದ ಅತ್ಯಧಿಕಾಂಶ ಪಾಲು ಅನ್ಯಜನಾಂಗಗಳವರನ್ನು ಕ್ರಿಸ್ತನ ಉತ್ತರಾಧಿಕಾರಕ್ಕೆ ಸ್ವಾಧೀನಪಡಿಸುವನು. "ಆತನು ಕಬ್ಬಿಣದ ಕೋಲಿನಿಂದ ಅವರನ್ನು ಆಳುವನು. ಮಣ್ಣಿನ ಮಡಕೆಗಳನ್ನೋ ಎಂಬಂತೆ ಒಡೆದು ಪುಡಿಪುಡಿ ಮಾಡುವನು" – ಕೀರ್ತನೆ 2ನೇ ಅಧ್ಯಾಯ, ಪ್ರಕಟನೆ 2:27.

ಮನುಷ್ಯಕುಮಾರನು ತನ್ನ ಅಧಿಕಾರವಹಿಸಿದ ಶಕ್ತಿ ಸಾಮರ್ಥ್ಯ ಜಗತ್ತಿಗೆ ಬಹಿರಂಗವಾಗುವುದು ಮತ್ತು ಅರಾಜಕತೆಯೆಂಬ ಕಠಿಣ ಸತ್ವಪರೀಕ್ಷೆ ಮೂಲಕ ಲೋಕವು ಮುಂದೆ ಸಾಗಲು ಆತನ ಅನುಮತಿಯು ಸ್ಪಷ್ಟವಾಗಿ ಸಮೀಪಿಸಿದೆ. ಯುದ್ಧದ ನಂತರ ಸ್ವಲ್ಪ ಸಮಯದಲ್ಲಿ ಚರ್ಚ್ ಧರ್ಮದ ಒಂದು ದೊಡ್ಡ ವಿಜಯೋತ್ಸವವಾಗುತ್ತದೆ. ಕೈಥೋಲಿಕ್ ಮತ್ತು ಪ್ರೊಟೆಸ್ಟೆಂಟ್ ಉಭಯರೂ ಈ ವಿಜಯೋತ್ಸವದಲ್ಲಿ ಭಾಗವಹಿಸುತ್ತಾರೆ. ರಾಜಕೀಯ ಮತ್ತು ಆರ್ಥಿಕ ದೊರೆಗಳೂ ತಮ್ಮ ಸ್ವಂತ ಶಕ್ತಿಯ ಬೆಳೆಸೋಣದ ನಿರೀಕ್ಷೆಯಲ್ಲಿ ಅದನ್ನು ಪ್ರೋತ್ಸಾಹಿಸುತ್ತಾರೆ. ಆ ಸಮಯದಲ್ಲಿ ನಿಜವಾದ, ನಿಷ್ಠಾವಂತ ಅನುಯಾಯಿಗಳ ಮೇಲೆ ಚರ್ಚತ್ವದಿಂದ ಬಲವಾದ ವಿರೋಧಉಂಟಾಗುತ್ತದೆಂದು ನಾವು ಎದುರುನೋಡಬಹುದು. ಇದರ ಪರಿಣಾಮವಾಗಿ ಗಂಭೀರವಾದ ಶೋಷಣೆಗಳು ಉಂಟಾಗಬಹುದು – ಪ್ರಾಯಶಃ ಸಾವುನೋವುಗಳಾಗಬಹುದು. ಆದರೆ ಬ್ಯಾಬಿಲೋನ್‍ನ ಈ ವಿಜಯವು ಕೊಂಚಕಾಲವಾಗಿರುತ್ತದೆ. ಈಗಾಗಲೇ ನಿರ್ಧಾರವಾದ ಶಿಕ್ಷೆಯನ್ನು ಶೀಘ್ರದಲ್ಲೇ ಕಾರ್ಯಗತಗೊಳಿಸಲಾಗುತ್ತದೆ ಮತ್ತು ಆಕೆಯು ಸಮುದ್ರಕ್ಕೆ ಬೀಸುವ ದೊಡ್ಡ ಕಲ್ಲಿನಂತೆ ಮತ್ತೆಂದಿಗೂ ಏಳದಂತೆ ಬೀಳುತ್ತಾಳೆ – ಅರಾಜಕತೆಯೊಳಗೆ – ವಿನಾಶದೊಳಕ್ಕೆ – ಮತ್ತೆಂದೂ ಏಳುವುದಿಲ್ಲ.

ಇನ್ನು ಸ್ವಲ್ಪ ಸಮಯದ ನಂತರ, ಬೈಬಲ್ ಚಿತ್ರಣದ ಪ್ರಕಾರ, ನಮ್ಮ ಪ್ರಸ್ತುತ ನಾಗರೀಕತೆಯ ಸಂಪೂರ್ಣ ಕುಸಿತವನ್ನು ನಾವು ನಿರೀಕ್ಷಿಸಬಹುದು. ಆದರೆ ಮನುಷ್ಯನ ವಿಷಮಸ್ಥಿತಿಯ ಕ್ಷಣವು ದೇವರ ಅವಕಾಶವಾಗಿರುತ್ತದೆ. ದೇವರಿಂದ ಆಯ್ಕೆಯಾದ ಮೆಸ್ಸೀಯನು ನಿಯಂತ್ರಣಕ್ಕೆ ತೆಗೆದುಕೊಳ್ಳುತ್ತಾನೆ. ಅಶಾಂತ ಜನರಿಗೆ ಸಮಾಧಾನದ ಮಾತನ್ನಾಡಿ ಗೊಂದಲದಿಂದ ವ್ಯವಸ್ಥೆಯನ್ನು, ಕಣ್ಣೀರಿನಿಂದ ಸಂತೋಷವನ್ನೂ, ಹತಾಶೆಯಿಂದ ಪ್ರಶಂಸೆಯನ್ನು ತರುತ್ತಾನೆ. ಹೀಗೆ ಭಯಾನಕ ಪ್ರಸವವೇದನೆಯಲ್ಲಿ ಮೆಸ್ಸೀಯನ ಸಾಮ್ರಾಜ್ಯವು ಜನಿಸುತ್ತದೆ, ದೇಶ ಉಂಟಾದಂದಿನಿಂದ ಇರದಂತಹ ಮಹಾ ಸಂಕಟವು ಇರುವಲ್ಲಿ ಪರಿಹಾರಕ್ಕಿಂತ ಮೇಲಾದ ಮಹಿಮಾಯುತ ಫಲಿತಾಂಶಗಳು ಹೆಚ್ಚಾಗಿರುತ್ತವೆ. ಆಗ ಸಮಸ್ತ ಜನಾಂಗಗಳ ಆಕಾಂಕ್ಷೆ ನೆರವೇರುವುದು. ಹಗ್ಗಾಯ 2:7.

ಈ ಪುಟಗಳು ಕರ್ತನ ಜನರಿಗೆ ಒಂದು ಆಶೀರ್ವಾದವನ್ನು ಮತ್ತು ಆತನ ನಾಮಕ್ಕೆ ಘನತೆಯನ್ನುಂಟುಮಾಡಿ ಮುಂದುವರೆಯಲಿ ಎಂಬುದೇ ಗ್ರಂಥಕರ್ತನ ಪ್ರಾರ್ಥನೆ.

ಸಹೋದರ ಚಾರ್ಲ್ಸ್ ಟಿ. ರಸಲ್
Charles T. Russell

ಬ್ರೂಕ್ಲಿನ್, ನ್ಯೂಯಾರ್ಕ್, ಅಕ್ಟೋಬರ್ 1, 1916.
Brooklyn, N.Y., October 1916

## ಕೃತಜ್ಞತೆಗಳು

ಸತ್ಯವೇದದಲ್ಲಿರುವ ಪ್ರವಾದನೆ ಮತ್ತು ಸತ್ಯಾಂಶಗಳನ್ನು ಅನೇಕ ವಿಮರ್ಶೆ ಮತ್ತು
ವ್ಯಾಖ್ಯಾನಗಳೊಂದಿಗೆ ಭಾಷಾಂತರಿಸಲು ಪ್ರೇರೇಪಣೆಯನ್ನು ದಯಪಾಲಿಸಿದ
ಮಹೋನ್ನತವಾದ ಯೆಹೋವ ದೇವರಿಗೂ ಮತ್ತು ನಮ್ಮೆಲ್ಲರ ಕರ್ತನೂ,
ರಕ್ಷಕನೂ ಆದ ಯೇಸು ಕ್ರಿಸ್ತನಿಗೂ ಕೃತಜ್ಞತಾ ಸ್ತೋತ್ರಗಳು.

ಈ ಪುಸ್ತಕವು ಮೂಲತಃ ಆಂಗ್ಲ ಭಾಷೆಯಲ್ಲಿ ಬರೆಯಲ್ಪಟ್ಟಿದ್ದು,
ಸಹೋದರರಾದ ಪಾಸ್ಟರ್: ಚಾರ್ಲ್ಸ್ ಟಿ. ರಸಲ್‌ರವರು (Pastor Charles T. Russel)
ಸತ್ಯವೇದ ಆಧಾರಿತ, ಪವಿತ್ರಾತ್ಮಪ್ರೇರಿತರಾಗಿ ಬರೆಯಲ್ಪಟ್ಟಿರುವ ಗ್ರಂಥಶ್ರೇಣಿಯ ಆರು
ಸಂಪುಟಗಳಲ್ಲೊಂದಾದ "**ನಿನ್ನ ರಾಜ್ಯವು ಬರಲಿ**" ಎಂಬ ಮೂರನೇ ಸಂಪುಟದಿಂದ
ಭಾಷಾಂತರಿಸಲಾಗಿದೆ. ಇದನ್ನು ಕನ್ನಡಕ್ಕೆ ಭಾಷಾಂತರಿಸಿದ ಸಹೋದರರಾದ
ಅಸ್ವಾಲ್ಡ್ ಎಗ್ಬರ್ಟ್ ಅಮ್ಮಣ್ಣನವರಿಗೆ ಸತ್ಯವೇದ ವಿದ್ಯಾರ್ಥಿಗಳ ಪರವಾಗಿ
ಹೃದಯಪೂರ್ವಕ ಕೃತಜ್ಞತೆಗಳು. ಈ ಭಾಷಾಂತರವು ಕನ್ನಡವನ್ನು ಬಲ್ಲ
ಎಲ್ಲಾ ಸಹೋದರ ಸಹೋದರಿಯರಿಗೆ ಒಂದು ವಿಶೇಷವಾದ ಕೊಡುಗೆಯಾಗಿದೆ.
ದೇವರ ನಾಮಕ್ಕೆ ಅನಂತ ಅನಂತ ಸ್ತೋತ್ರವಾಗಲಿ.

ಕಡೆಯದಾಗಿ ಇದರ ಮುದ್ರಣಕ್ಕೆ ಮುಂಚೆ ಈ ಭಾಷಾಂತರವನ್ನು
ಪರಿಷ್ಕರಿಸಿದ ಹಿರಿಯ ಸಹೋದರರಿಗೂ, ಇದಕ್ಕಾಗಿ ಸಹಕರಿಸಿದ ಅನೇಕ
ಸಹೋದರ-ಸಹೋದರಿಯರಿಗೂ ಮತ್ತು ಈ ಪುಸ್ತಕವನ್ನು ತಮ್ಮ ಕೆಲಸವೆಂದೇ
ಪರಿಗಣಿಸಿ, ಶ್ರಮಿಸಿ ಅಂದವಾಗಿ ಮುದ್ರಿಸಿಕೊಟ್ಟ
ಡಾನ್ ಪ್ರಿಂಟಿಂಗ್ ಸರ್ವೀಸ್‌ರವರಿಗೂ (Dawn Printing Service)
ನಮ್ಮ ಹೃದಯಪೂರ್ವಕ ವಂದನೆಗಳು.

ಸರ್ವಶಕ್ತನಾದ ಯೆಹೋವ ದೇವರ ಆಶೀರ್ವಾದ
ಮತ್ತು
ನಮ್ಮ ರಕ್ಷಕನಾದ ಯೇಸುಕ್ರಿಸ್ತನ ಕೃಪೆಯು ಈ ಪುಸ್ತಕವನ್ನು
ಓದುವವರೆಲ್ಲಗೊಂದಿಗಿದ್ದು ಆ ದೈವಜ್ಞಾನವನ್ನು ಪಡೆದು
ಆತ್ಮೀಕ ಅಭಿವೃದ್ಧಿ ಹೊಂದಿಕೊಳ್ಳಲಿ ಎಂದು ಹಾರೈಸುತ್ತೇವೆ.

## ಅಧ್ಯಯನ – 1

## ನಿನ್ನ ರಾಜ್ಯವು ಬರಲಿ

## Thy Kingdom Come

ದೇವರ ರಾಜ್ಯದ ಪ್ರಾಮುಖ್ಯತೆ, ಅದರಲ್ಲಿ ಆಸಕ್ತರಾಗಿರುವ ಮನುಷ್ಯರ ವರ್ಗವು, ಅದನ್ನು ವಿರೋಧಿಸುವವರ ವರ್ಗವು ಮತ್ತು ಯಾಕೆ ವಿರೋಧಿಸುತ್ತಾರೆ? ದೇವರ ರಾಜ್ಯದ ಸಾನಿಧ್ಯ, ಅದರ ಸ್ವರ್ಗೀಯ ವೈಭವ. ಅದರ ಪ್ರಸ್ತುತವಾದ ಸ್ಥಾಪನೆ. .................. 1

## ಅಧ್ಯಯನ – 2

## "ಅಂತಿಮ ಸಮಯ" ಅಥವಾ ಆತನ "ಸಿದ್ಧತೆಯ ದಿನ" – ದಾನಿಯೇಲ 11

## "The Time of the End" or "Day of His Preparation"

**- Daniel - XI**

ಅಂತಿಮ ಸಮಯ. ಅದರ ಪ್ರಾರಂಭ ಕ್ರಿ.ಶ. 1799, ಅದರ ಅಂತ್ಯ ಕ್ರಿ.ಶ. 1914. ಸಿದ್ದತೆಮಾಡಬೇಕಾದುದೇನು? ಮತ್ತು ಅದರ ಉದ್ದೇಶ, ಪ್ರಪಂಚದ ಇತಿಹಾಸವನ್ನು ಪ್ರವಾದನೀಯವಾಗಿ ಅದರ ಮುಖ್ಯ ಆಡಳಿತಗಾರರ ಮೂಲಕ ಪತ್ತೆಹಚ್ಚಲಾಗಿದೆ. ಕ್ರಿಪೂ 405 ರಿಂದ ಈ ಸಿದ್ಧತಾ ದಿನದವರೆಗೆ. ಅಂತಿಮ ದಿನದ ಪ್ರಾರಂಭದ ಸಮಯವನ್ನು ನಿಶ್ಚಿತವಾಗಿ ಗುರುತುಪಡಿಸಲಾಗಿದೆ, ಆದಾಗ್ಯೂ ಹೆಸರುಗಳು ಅಥವಾ ದಿನಾಂಕಗಳಿಲ್ಲದೆ. .................. 4

## ಅಧ್ಯಯನ – 3

## ದೇವರ ರಾಜ್ಯಕ್ಕಾಗಿ ಕಾಯುವ ದಿನಗಳು – ದಾನಿಯೇಲ 12

## Days of Waiting for the Kingdom

**- Daniel - XII**

ರಾಜ್ಯದ ಕಾರ್ಯವನ್ನು ಸಂಕ್ಷೇಪಗೊಳಿಸಲಾಗಿದೆ – ಕಾಯುವ ಸಮಯವನ್ನು ತಿಳುವಳಿಕೆ ಹಾಗೂ ಪ್ರಯಾಣದ ಮಹತ್ತರ ಹೆಚ್ಚಳದ ಮೇಲೆ ಗುರುತಿಸಲಾಗುವುದು – ಸರ್ ಐಸಾಕ್ ನ್ಯೂಟನ್ನನ 'ರೈಲ್ ರೋಡಿಂಗ್'ನ ಮುನ್ನೋಟ – 1260 ದಿನಗಳು – ಮಹಾಸರ್ಪದ ಬಾಯಿಂದ ಪ್ರವಾಹ – ದರ್ಶನದ ಹರಡುವಿಕೆ ಮತ್ತು ಅದನ್ನು ಅರ್ಥಮಾಡಿಕೊಳ್ಳಲು 1290 ದಿನಗಳನ್ನು ಗುರುತಿಸುವುದು, ಭಾಗಶಃವಾಗಿ ಸರಿಯಾಗಿದೆ – ಆಶಾಭಂಗ, ಪರೀಕ್ಷೆ ಮತ್ತು ಪರಿಣಾಮಗಳು – 1335 ದಿನಗಳು. ಆಗ ನಿಷ್ಠಾವಂತಿಕೆಯಿಂದ ಕಾಯುವವರ ಮೇಲೆ ಆಶೀರ್ವಾದ – ಈ ಕಾಯುವ ದಿನಗಳು ಕರ್ತನ ಉಲ್ಲೇಖ. ಹತ್ತು ಕನ್ಯೆಯರ ಸಾಮ್ಯ ................ 29

## ಅಧ್ಯಯನ – 4

## 'ಪವಿತ್ರಾಲಯದ ಶುದ್ಧೀಕರಣ' 2300 ದಿನಗಳು – ದಾನಿಯೇಲ 8 : 10–26

## The Cleansing of the Sanctuary

**2300 Days - Dan. 8 : 10-26**

ನಿಜವಾದ ಪವಿತ್ರಾಲಯ. ಮಲಿನಗೊಳಿಸುವಿಕೆ. ತಳ ಅಥವಾ ಅಸ್ತಿವಾರ. "ಯಾವ ರೀತಿ ಕೆಡವಲ್ಪಟ್ಟಿತ್ತು". ಈ ಬಗ್ಗೆ ರೋಮನ್ ಕೈಥೋಲಿಕ್ ಬರಹಗಳ ಪುರಾವೆಗಳು. ದರ್ಶನದ ನಂತರ 2300 ವರ್ಷಗಳವರೆಗೆ ಶುದ್ಧೀಕರಣವು ಯಶಸ್ವಿಯಾಗುವುದಿಲ್ಲ. ಹೇಗೆ ಮತ್ತು ಎಲ್ಲಿ ಪ್ರಾರಂಭವಾಯಿತು, ಮತ್ತು ಇದರ ಮುಕ್ತಾಯ ಯಾವಾಗ ಯುಕ್ತವಾಗಿದೆ? "ಬಂಗಾರದ ಪಾತ್ರೆಗಳು" ಸತ್ಯಗಳು ಬದಲಾಯಿಸಲೇ ಬೇಕು. .................. 50

## ಅಧ್ಯಯನ – 5

# ‘ಸುಗ್ಗಿಯ ಕಾಲ’

## The Time of Harvest

ಸುಗ್ಗಿಯ ಕಾಲಾನುಕ್ರಮವಾದ ಸ್ಥಳ – ಅದರ ಉದ್ದೇಶ ಮತ್ತು ಮಹಾಪ್ರಾಧ್ಯಾನತೆ – ಕಾಲ ಪ್ರವಾದನೆಗಳ ತೇಜಕೇಂದ್ರ. ಸಬ್ಬತ್ತಿಗಾಗಿ ಸಿದ್ಧತೆಗಳು – ಪ್ರವಾದನೀಯ ಸಾಕ್ಷ್ಯದ ಒಗ್ಗೂಡಿಸುವಿಕೆಯ ಮಹತ್ವ – ಕರ್ತನ ಪ್ರತ್ಯಕ್ಷತೆ – ಸಮಂಜಸವಾದ ಆಕ್ಷೇಪಣೆಗಳಿಗೆ ಉತ್ತರಿಸಲಾಗಿದೆ – ನಮ್ಮ ಕರ್ತನ ಸಂತೋಷ ಪ್ರವೇಶ. “ಸುಗ್ಗೀಕಾಲ ಅಂದರೆ ಯುಗದ ಸಮಾಪ್ತಿ” (ಮತ್ತಾಯ 13:39) .................67

## ಅಧ್ಯಯನ – 6

# ಸುಗ್ಗಿಯ ಕಾರ್ಯ

## The Work of Harvest

ಸುಗ್ಗಿಯ ಕಾರ್ಯದ ಲಕ್ಷಣಗಳು. ಗೋಧಿಯನ್ನು ಶೇಖರಿಸುವುದು. ಅದನ್ನು ಹೊರೆಯನ್ನಾಗಿ ಮಾಡಿ ಕಟ್ಟುವುದು ಮತ್ತು ಹಣಜಿಯನ್ನು ಸುಟ್ಟುಹಾಕುವುದು. ಅವುಗಳ ಮೂಲ ಮತ್ತು ಫಲಭರಿತವಾದ ಬೆಳೆಯುವಿಕೆ. ಅದನ್ನು ಯೆಹೂದ್ಯ ಸುಗ್ಗಿಯ ಹೊಟ್ಟು ಎಂಬಂತೆ ನಾಶಮಾಡುವುದು, ಕಾಲದ ಸರಿಹೊಂದುವಿಕೆಗಳು ಗಮನಾರ್ಹವಾಗಿವೆ. ಬಾಬೇಲಿನ ತಿರಸ್ಕರಿಸುವಿಕೆ, ಕ್ರಮೇಣವಾದ ಪತನ ಮತ್ತು ಅಂತಿಮ ನಾಶನ. ಬಾಬೇಲಿನ ಮೇಲೆ ಪಿಡುಗು ಬರುವ ಮೊದಲು ದೇವರ ಸೇವಕರಿಗೆ ಮುದ್ರೆ ಹಾಕುವಿಕೆ. ನ್ಯಾಯತೀರ್ಪು ಅಥವಾ ವಿಚಾರಣೆ, ಎರಡೂ ಪದ್ಧತಿಗಳಾಗಿ ಮತ್ತು ವ್ಯಕ್ತಿಗತವಾಗಿ. ಯೆಹೂದ್ಯರ ಸಾಂಕೇತಿಕ ಪದ್ಧತಿಯ ಪರೀಕ್ಷೆ. ಗೋಧಿಯ ಪರೀಕ್ಷೆ ಮತ್ತು ಸೋಸುವಿಕೆ. ಬುದ್ಧಿವಂತರಾದ ಕನ್ಯೆಯರನ್ನು ಬುದ್ಧಿಹೀನ ಕನ್ಯೆಯರಿಂದ ಪ್ರತ್ಯೇಕಿಸಿದ್ದು, ಔತಣಕ್ಕೆ ಹೋಗುವುದು. “ಮತ್ತು ಬಾಗಿಲು ಮುಚ್ಚಲ್ಪಟ್ಟಿತು”. ಮುಂದಣ ವಿಚಾರಣೆ, ಮತ್ತು ಕೆಲವರನ್ನು ಹೊರಹಾಕುವುದು. ಯಾಕೆ? ಮತ್ತು ಹೇಗೆ? “ಉನ್ನತ ಕರೆ”ಯ ಮುಕ್ತಾಯ. ಸಮಯವು ಸ್ವಲ್ಪವಾಗಿದೆ. “ನಿನ್ನ ಕಿರೀಟವನ್ನು ಬೇರೆ ಯಾರೂ ತೆಗೆದುಕೊಳ್ಳದಿರಲಿ”. ಹನ್ನೊಂದನೆಯ ಗಂಟೆಯ ಸೇವಕರು ಮತ್ತು ಜಯಶಾಲಿಗಳು. .................. 77

## ಅಧ್ಯಯನ – 7

# ಸಭೆಯ ಬಿಡುಗಡೆ ಹಾಗೂ ಉನ್ನಕ್ಕೇರಿಸಲ್ಪಡುವದು

## The Deliverance and Exaltation of the Church

ಸಭೆಯ ಬಿಡುಗಡೆಯು ಸಮೀಪಿಸುತ್ತಿದೆ. ಎಲ್ಲಾ ಮಾನವಜಾತಿಗೆ ಇದು ಬಿಡುಗಡೆಯ ಮುನ್ಸೂಚಕ. ಅದರ ದಿನಾಂಕವನ್ನು ಅಂದಾಜಿಸಲಾಗಿದೆ. ಲೋಕದ ಮೇಲೆ ಬರುವ ಸಂಗತಿಗಳಿಂದ ಸಂತರುಗಳು ಹೇಗೆ ಪಾರಾಗುತ್ತಾರೆ?. ಆಕೆಗೆ ದೇವರು ಹೇಗೆ ಮತ್ತು ಯಾವಾಗ ಸಹಾಯಮಾಡುತ್ತಾನೆ? ಆಕೆಯ ಅಂತಿಮ ಬಿಡುಗಡೆಯ ರೀತಿ ಮತ್ತು ಸಂದರ್ಭಗಳು. ಕ್ರಿಸ್ತನಲ್ಲಿ ನಿದ್ರೆ ಹೋದವರಿಗೆ ಮೊದಲಿಗೆ ಬಿಡುಗಡೆ. ಸಭೆಯ ಜೀವಂತ ಸದಸ್ಯರುಗಳ ಮಾರ್ಪಡುವಿಕೆ. ಅವರು ಮರಣಹೊಂದುತ್ತಾರೋ? ಇಂದಿನಿಂದ ಕರ್ತನ ಭಕ್ತರಾಗಿ ಸಾಯುವವರು ಧನ್ಯರು.

“ನೋಡಿರಿ, ನಿಮ್ಮ ತಲೆ ಎತ್ತಿರಿ; ನಿಮ್ಮ ಬಿಡುಗಡೆಯು ಸಮೀಪವಾಗಿದೆ” (ಲೂಕ 21 : 28)

. . . . . . . . . . . . . . . . . . 138

## ಅಧ್ಯಯನ – 8

# ಇಸ್ರಾಯೇಲ್ಯರ ಪುನಃಸ್ಥಾಪನೆ

## The Restoration of Israel

ಪಾಲೆಸ್ಟೈನಿನಲ್ಲಿ ಇಸ್ರಾಯೇಲ್ಯರ ಪುನಃಸ್ಥಾಪನೆ, ಸುಗ್ಗಿಯ ಕಾಲದೊಳಗೆ ನಿರೀಕ್ಷಿಸಬಹುದಾದ ಘಟನೆ, ಹೇಗೆ? ಮತ್ತು ಎಷ್ಟರಮಟ್ಟಿಗೆ? ಮತ್ತು ಯಾವ ವರ್ಗದವರೊಡನೆ ನಾವು ಈ ಪುನರ್‌ಸ್ಥಾಪನೆಯನ್ನು ನಿರೀಕ್ಷಿಸಬಹುದು – ಅದರ ಪ್ರಾರಂಭದ ದಿನಾಂಕ, ಅಂದಿನಿಂದ ಅದರ ನಿಜವಾದ ಪ್ರಗತಿಯ ನಿದರ್ಶನ. ಯಾಕೆ ಸಹಸ್ರಮಾನದ ಆಶೀರ್ವಾದಗಳು ಎಲ್ಲಾ ಮಾನವ ಜಾತಿಯನ್ನು ಉದ್ದೇಶಿಸಿವೆ, ಯೆಹೂದ್ಯರನ್ನು ಮೊದಲಿಗೆ ತಲುಪಿ ಪುನರುಜ್ಜೀವನಗೊಳಿಸುತ್ತವೆ – ಯೆಹೂದ್ಯ ಪುನರುಜ್ಜೀವನದ ನಿರೀಕ್ಷೆ – ಪ್ರಮುಖರಾದ ಯೆಹೂದ್ಯರ ಮತ್ತು ಅನ್ಯಜನದ ಲೇಖಕರ ಅವಲೋಕನ – ಪ್ರವಾದನೆಗಳೊಂದಿಗೆ ಇವರ ಸಾಮರಸ್ಯ – ಕ್ರಿಸ್ತನನ್ನು ಈಗಾಗಲೇ ನಿರಾಕರಿಸಿರುವರ ಇಸ್ರಾಯೇಲ್ಯರ ಕುರುಡುತನವು ಈಗ ದೂರವಾಗುತ್ತದೆ – ಚಳುವಳಿಯ ಹರಡುವಿಕೆ ಮತ್ತು ತೀವ್ರತೆ – ದೇವರು ಅವರಿಗೆ ನೆರವಾಗುತ್ತಾನೆ. .................149

## ಅಧ್ಯಯನ – 9

## ನಿನ್ನ ದೇವರು ರಾಜ್ಯಭಾರವನ್ನು ವಹಿಸಿದ್ದಾನೆ

### Thy God Reigneth

ಇಮ್ಮಾನುವೇಲನ ಪ್ರತ್ಯಕ್ಷತೆಯನ್ನು ತೋರುವ ಪ್ರವಾದನೀಯ ನಿದರ್ಶನಗಳ ಪುನಃರಾರಂಭ,
ಮತ್ತು ಆತನ ರಾಜ್ಯವು ಸ್ಥಾಪನೆಯ ಪ್ರಕ್ರಿಯೆಯಲ್ಲಿದೆ

"ಪರ್ವತಗಳ ಮೇಲೆ ತ್ವರೆಪಡುತ್ತಾ ಶುಭಸಮಾಚಾರವನ್ನು ತಂದು ಸಮಾಧಾನವನ್ನು ಸಾರುವ ದೂತನ ಪಾದಗಳು ಎಷ್ಟೋ ಅಂದವಾಗಿವೆ! ಒಳ್ಳೆಯ ಶುಭವರ್ತಮಾನವನ್ನು, ಶುಭದ ಸುವಾರ್ತೆಯನ್ನು ತಂದು ರಕ್ಷಣೆಯನ್ನು ಪ್ರಕಟಿಸುತ್ತಾ – ನಿನ್ನ ದೇವರು ರಾಜ್ಯಭಾರವನ್ನು ವಹಿಸಿದ್ದಾನೆ ಎಂದು ಚಿಯೋನಿಗೆ ತಿಳಿಸುವವನಾಗಿದ್ದಾನೆ" (ಯೆಶಾಯ 52:7). . . . . . . . . . . . . . . . . . **191**

## ಅಧ್ಯಯನ – 10

## ದೇವರ ಕಲ್ಲು ಸಾಕ್ಷಿಗಳ ಪ್ರಮಾಣ ಮತ್ತು ಪ್ರವಾದಿ, ಐಗುಪ್ತದಲ್ಲಿರುವ ಮಹಾ ಪಿರಮಿಡ್

### The Testimony of God's Stone Witness and Prophet, The Great Pyramid in Egypt

ಮಹಾ ಪಿರಮಿಡ್‌ನ ಸಾಮಾನ್ಯ ವರ್ಣನೆ, ಇದು ಕ್ರೈಸ್ತರಿಗೆ ಯಾಕೆ ವಿಶೇಷ ಆಸಕ್ತಿಕರವಾಗಿದೆ? ಮಹಾ ಪಿರಮಿಡ್ ಸತ್ಯದ ಉಗ್ರಾಣವಾಗಿದೆ. ವೈಜ್ಞಾನಿಕ, ಐತಿಹಾಸಿಕ ಮತ್ತು ಪ್ರವಾದನೀಯ – ಎಂಬುದಕ್ಕೆ ಸತ್ಯವೇದದ ಇಂಗಿತಗಳು. ಯಾಕೆ? ಎಲ್ಲಿ? ಮತ್ತು ಯಾರಿಂದ ಕಟ್ಟಲ್ಪಟ್ಟವು? ಅದರ ಸ್ಥಳದ ಮಹತ್ವ. ಅದರ ವೈಜ್ಞಾನಿಕ ಪಾಠಗಳು, ವಿಮೋಚನೆಯ ಯೋಜನೆ, ಇವುಗಳ ಕುರಿತಾಗಿ ಅದರ ಪುರಾವೆ, ಯುಗಗಳ ಯೋಜನೆ, ಕ್ರಿಸ್ತನ ಮರಣ ಮತ್ತು ಪುನರುತ್ಥಾನಗಳು ಸೂಚಿತವಾಗಿವೆ. ಲೋಕವನ್ನು ಕೆಳಗೊಯ್ಯುತ್ತಿರುವ ಪಥ, ಸಂಕಷ್ಟದ ಮಹಾ ಸಮಯದಲ್ಲಿ ಮುಕ್ತಾಯಗೊಳ್ಳುವದು. ಸಂಕಷ್ಟದ ಸಹಜಗುಣ. ಮಹಾ ಸುಧಾರಣಾ ಚಳುವಳಿಯನ್ನು ಗುರುತಿಸಲಾಗಿದೆ – ಯೆಹೂದ್ಯ ಯುಗದ ವಿಸ್ತಾರವನ್ನು ಸೂಚಿಸಲಾಗಿದೆ – ಸುವಾರ್ತಾ ಸಭೆಯ 'ಮಹಾಕರೆಯು' ತೋರಿಸಲಾಗಿದೆ – ಸಭೆಯ ಪ್ರತಿಷ್ಠೆಯ ಕ್ರಮ. ಮಹಾ ಕರೆಯ ಅಂತ್ಯವನ್ನು ಗುರುತಿಸಲಾಗಿದೆ – ಕ್ರಿಸ್ತನ ದ್ವಿತಿಯಾಗಮನದ ದಿನಾಂಕ – ಪ್ರಪಂಚದ ಪುನರ್‌ಸ್ಥಾಪನೆಯ ಆಶೀರ್ವಾದಗಳು ಹೇಗೆ ಸೂಚಿತಗೊಂಡಿವೆ – ಸಹಸ್ರಮಾನ ಯುಗದಲ್ಲಿ ಪ್ರಪಂಚದ ನಡವಳಿಕೆ – ಅದರ ಅಂತ್ಯ – ಪಿರಿಮಿಡ್‌ನಲ್ಲಿ ಸೂಚಿತವಾಗಿರುವಂತೆ ಮಾನವ ಮತ್ತು ಆತ್ಮಿಕ ಸ್ಥಿತಿಗಳ ವ್ಯತ್ಯಾಸಗಳು – ಪಿರಮಿಡ್ ನಾಸ್ತಿಕವಾದವನ್ನು, ಧರ್ಮನಿಂದನೆಯನ್ನು ಮತ್ತು ಎಲ್ಲಾ ವಿಕಾಸವಾದದ ವಿಚಾರಣ ಸರಣಿಯನ್ನು ಖಂಡಿಸುತ್ತದೆ ಮತ್ತು ಸತ್ಯವೇದದ ಯೋಜನೆಯನ್ನು ಮತ್ತು ಅದರ ನಿಗದಿತ ಸಮಯಗಳು ಮತ್ತು ಕಾಲಗಳನ್ನು ಪರಿಶೀಲನೆ ಮಾಡುತ್ತದೆ.

"ಆ ದಿನದಲ್ಲಿ ಐಗುಪ್ತ ದೇಶದ ಮಧ್ಯೆ ಯೆಹೋವನಿಗೆ ಒಂದು ಯಜ್ಞಪೀಠವೂ ದೇಶದ ಎಲ್ಲೆಯಲ್ಲಿ ಯೆಹೋವನಿಗೆ ಒಂದು ಸ್ಥಂಭವೂ ಇರುವುವು. ಅವು ಐಗುಪ್ತ ದೇಶದಲ್ಲಿ ಸೇನಾಧೀಶ್ವರನಾದ ಯೆಹೋವನ ಗುರುತಾಗಿಯೂ ಸಾಕ್ಷಿಯಾಗಿಯೂ ಇರುವುವು" (ಯೆಶಾಯ 19: 19–20).

. . . . . . . . . . . . . . . . . . **196**


* * * * * * *

# ನಮ್ಮ ನಂಬಿಕೆ

ನಾನು ಒಬ್ಬನೇ ಸತ್ಯದೇವರನ್ನು ನಂಬುತ್ತೇನೆ. ಆತನೊಬ್ಬನಿಗೇ **"ಯೆಹೋವ"** ಎಂದು ಹೆಸರು. ಆತನು ರಾಜಾಧಿರಾಜನೂ, ಕರ್ತರ ಕರ್ತನೂ, ತಾನೊಬ್ಬನೇ ಅಮರತ್ವವುಳ್ಳವನೂ, ಅಗಮ್ಯವಾದ ಬೆಳಕಿನಲ್ಲಿ ವಾಸ ಮಾಡುವವನೂ ಆಗಿದ್ದಾನೆ. ಮನುಷ್ಯರಲ್ಲಿ ಯಾರೂ ಆತನನ್ನು ಕಾಣಲಿಲ್ಲ. ಯಾರೂ ಕಾಣಲಾರರು. ಆತನಿಗೆ ಮಾನವೂ, ನಿತ್ಯಾಧಿಪತ್ಯವೂ ಇರಲಿ, ಆಮೆನ್. [ಯೋಹಾನ 17:3; ಕೀರ್ತನೆ 83:18; 1ತಿಮೋಥಿ. 6:15, 16; ವಿಮೋ. 6:3; ಯೋಹಾನ 1:18; 1 ಕೊರಿಂಥ 8:5,6.]

ಯೆಹೋವ ದೇವರ ಒಬ್ಬನೇ ಮಗನೂ, ನಮ್ಮ ಕರ್ತನೂ, ರಕ್ಷಕನೂ ಆದ **"ಯೇಸುಕ್ರಿಸ್ತ"**ನನ್ನೂ ನಂಬುತ್ತೇನೆ.

ಈತನು ದೇವರ ಪ್ರತಿರೂಪನೂ, ಸೃಷ್ಟಿಗೆಲ್ಲಾ ಜ್ಯೇಷ್ಠಪುತ್ರನೂ ಆಗಿದ್ದಾನೆ. ಯೆಹೋವನು ಯೇಸುಕ್ರಿಸ್ತನ ಮೂಲಕವಾಗಿ ಸಮಸ್ತವನ್ನೂ ಉಂಟುಮಾಡಿ ಯೇಸುಕ್ರಿಸ್ತನನ್ನು ಸಮಸ್ತಕ್ಕೂ ಭಾಧ್ಯಸ್ಥನನ್ನಾಗಿ ನೇಮಿಸಿರುವನು. ಸಮಸ್ತವೂ ಯೇಸುಕ್ರಿಸ್ತನಲ್ಲಿ ನೆಲೆಸಿರುವುದೆಂದು ನಂಬುತ್ತೇನೆ. [ಕೊಲೊಸ್ಸೆ. 1:15,16; ಎಫೆಸ. 1:2; ಯೋಹಾನ 3:16]

ಈತನು ದೇವಸ್ವರೂಪನಾಗಿದ್ದರೂ, ದೇವರಿಗೆ ಸರಿಸಮಾನನಾಗಿರುವನೆಂಬ ಅಮೂಲ್ಯ ಪದವಿಯನ್ನು (ಬಿಡಲೊಲ್ಲೆನು) ಕೊಳ್ಳೆ ಎಂದೆಣಿಸದೆ, ತನ್ನನ್ನು ಬರಿದು ಮಾಡಿಕೊಂಡು, ದಾಸನ ರೂಪವನ್ನು ಧರಿಸಿಕೊಂಡು, ಮನುಷ್ಯರಿಗೆ ಸದೃಷ್ಯನಾಗಿ, ಪಾಪಗಳಿಂದ ಮರಣವನ್ನು ಅನುಭವಿಸುತ್ತಿರುವ ಮಾನವರನ್ನು ರಕ್ಷಿಸುವುದಕ್ಕೋಸ್ಕರವಾಗಿ ತನ್ನನ್ನು ತಾನೇ ಬರಿದುಮಾಡಿಕೊಂಡು, ಎಲ್ಲರನ್ನೂ ಬಿಡಿಸಿಕೊಳ್ಳಲು ಮನುಷ್ಯನಾಗಿ, ಜೀವವನ್ನೇ ಕೊಟ್ಟು ದೇವರಿಗೂ ಮನುಷ್ಯರಿಗೂ ಸಮಾಧಾನವನ್ನುಂಟು ಮಾಡಿದನೆಂದು ನಂಬುತ್ತೇನೆ. [ ಯೋಹಾನ. 10:36; ಫಿಲಿ. 2:6,7; ಯೆಶಾಯ 53:4,5]

ಆದುದರಿಂದ ದೇವರು ಈತನನ್ನು ಸತ್ತವರೊಳಗಿಂದ ಎಬ್ಬಿಸಿ ತನ್ನ ಹಾಗೆಯೇ ಕುಮಾರನನ್ನೂ ಜೀವವುಳ್ಳವನಾಗಿರುವಂತೆ ಉಂಟುಮಾಡಿ, ಬೇರೆ ಎಲ್ಲಾದಕ್ಕೂ ಮೇಲಾದ ಜೀವ ಕೊಟ್ಟು, ತನ್ನ ಮಹಿಮೆಯಿಂದ ಬಲಗಡೆಯಲ್ಲಿ ಕುಳಿತುಕೊಳ್ಳುವಂತೆ ಮಾಡಿದನು ಎಂಬುದನ್ನು ನಂಬುತ್ತೇನೆ. [ಅ.ಕೃ. 3:15; ಯೋಹಾನ 5:26; ಫಿಲಿ. 2:9]

ಯೇಸುಕ್ರಿಸ್ತನೇ ದೇವರಿಗೂ ಮನುಷ್ಯರಿಗೂ ಮಧ್ಯಸ್ಥನಾಗಿಯೂ, ಸಭೆಯೆಂಬ ಶರೀರಕ್ಕೂ ಶಿರಸ್ಸಾಗಿಯೂ ಇದ್ದಾನೆ ಎಂಬುದನ್ನೂ ನಂಬುತ್ತೇನೆ. [1ತಿಮೋಥಿ. 2:5; ಎಫೆಸ 1:23; ಕೊಲೊಸ್ಸೆ. 1:18]

ಯೇಸುಕ್ರಿಸ್ತನು ಪರಲೋಕಕ್ಕೆ ಏರಿಹೋಗಿ ತಾನು ವಾಗ್ದಾನ ಮಾಡಿದ "ಪರಿಶುದ್ಧಾತ್ಮ" ಶಕ್ತಿಯನ್ನು ನಂಬಿಕೆಯುಳ್ಳ ತನ್ನ ಸಭೆಗೆ ಕೊಟ್ಟು , ದೈವಚಿತ್ತವನ್ನು ಅವರಿಗೆ ಪ್ರಕಟಿಸಿ, ಬಲಿಯ ಜೀವನದಲ್ಲಿ ಅವರನ್ನು ನಡೆಸಿಕೊಂಡು ಬರುತ್ತಿದ್ದಾನೆ ಎಂಬುದನ್ನೂ ನಂಬುತ್ತೇನೆ. [ಅ. ಕೃ. 1:11; ಲೂಕ 1:35, 24:49; ರೋಮಾಪುರ. 12:1]

ತಂದೆಯು ಹೇಳಿದ ಕಾಲದವರೆಗೆ ಸಭೆ ಬಲಿ ಎಂಬ ಮರಣಕ್ಕೆ ಒಳಪಟ್ಟು ಪ್ರಥಮ ಪುನರುತ್ಥಾನವನ್ನು ಹೊಂದುವ ತನ್ನ ಸಭೆಯಾದ ಸಕಲ ಪರಿಶುದ್ಧರಾದವರೊಡನೆ ಈ ಭೂಮಿಯನ್ನು ನೀತಿಗನುಸಾರ ನ್ಯಾಯವಿಚಾರಣೆ ಸಕಲ ದೊರೆತನವನ್ನೂ, ಅಧಿಕಾರವನ್ನೂ, ಶಕ್ತಿಯನ್ನೂ ಸರಿಪಡಿಸಿ, ಎಂದಿಗೂ ನಾಶವಾಗದ ತನ್ನ ನೀತಿಯುಳ್ಳ ಸಮಾಧಾನದ ರಾಜ್ಯವನ್ನು ಸ್ಥಾಪಿಸುವನೆಂದು ನಂಬುತ್ತೇನೆ. [ ಯೂದ 14,15; ಎಫೆಸ. 1:9; ಪ್ರಕಟನೆ 20:4,6; ದಾನಿ. 7:27; ಕೀರ್ತನೆ 72:2; 2 ಪೇತ್ರ 3:13; 1ಕೊರಿಂಥ 15:24]

ಮರಣ ಹೊಂದಿದ ಬೇರೆ ಎಲ್ಲಾ ಜನಾಂಗದವರೂ ಕ್ರಿಸ್ತನ ಸಾವಿರ ವರ್ಷ ಆಳ್ವಿಕೆಯ ಕಾಲದಲ್ಲಿ ಅವರವರು ತಮ್ಮ ತಮ್ಮ ತರಗತಿಯಲ್ಲಿ ಜೀವಿತರಾಗಿ ಎದ್ದು ಕ್ರಿಸ್ತನು ತನ್ನ ಮರಣದಿಂದ ಸಂಪಾದಿಸಿದ ನಿತ್ಯಜೀವವನ್ನು ಹೊಂದಲು ಕ್ರಿಸ್ತನ ಮಾರ್ಗದಲ್ಲಿ ನಡೆದು ಪೂರ್ಣರಾಗುವರು. ಆದರೆ ಮನಃಪೂರ್ವಕವಾಗಿ ನಂಬದವರು ಎರಡನೆಯ ಮರಣದಲ್ಲಿ ನಾಶವಾಗುವರು ಎಂಬುದನ್ನೂ ನಂಬುತ್ತೇನೆ. [ಪ್ರಕ. 20:6,14,15; 1ಕೊರಿ. 15:23; ಯೋಹಾ. 5:28,29; ಯೆಶಾ. 2:2,4, 26:9; ಅ.ಕೃ. 3:23]

ಎಲ್ಲಾ ಶತ್ರುಗಳನ್ನೂ ಕ್ರಿಸ್ತನು ತನ್ನ ಪಾದಪೀಠವಾಗಿ ಮಾಡಿಕೊಳ್ಳುವ ತನಕ ಆಳ್ವಿಕೆ ಮಾಡಿ, ಕೊನೇ ಶತ್ರುವಾದ ಮರಣವನ್ನು ನಾಶಮಾಡಿ, ಸಮಸ್ತವನ್ನೂ (ಏದೇನಿನಲ್ಲಿ ಇದ್ದಂತೆ) ಸರಿಪಡಿಸಿ, ತಂದೆಯಾದ ಯೆಹೋವನಿಗೆ ರಾಜ್ಯವನ್ನು ಒಪ್ಪಿಸಿ ಯೆಹೋವನಿಗೆ ಕ್ರಿಸ್ತನೇ ಅಧೀನನಾಗುವನು. ಹೀಗೆ ದೇವರು ಸಮಸ್ತರಲ್ಲಿ ಸಮಸ್ತವೂ ಆಗುವನು ಎಂದು ನಂಬುತ್ತೇನೆ. ಆಮೆನ್. [1 ಕೊರಿಂಥ. 15:25–28; ಯೆಶಾಯ 11:3,9; 35ನೇ ಅಧ್ಯಾಯ, 65:17, ಪ್ರಕಟನೆ 21:24]

********